**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**ಎಸ್.ಸಿ. 116/2020**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಮ್ಯಾಥ್ಯೂ ಬೆನಹ್ಯಾಂ | ಪ್ರಮಾಣ ಮಾಡಿದ ದಿನಾಂಕಃ |
| ತಂದೆ ಹೆಸರು | ಃ ರಷ್ಕಿನ್ ಬೆನಹ್ಯಾಂ | **23.11.2022** |
| ವಯಸ್ಸು | ಃ **32** ವರ್ಷ | |
| ವೃತ್ತಿ | ಃ ಖಾಸಗಿ ಉದ್ಯೋಗ | ಪಿಡಬ್ಲ್ಯೂ ಃ **02** |
| ವಾಸ ಸ್ಥಳ | ಃ ಮೈಸೂರು | ಸಿಡಬ್ಲ್ಯೂ ಃ **02** |

*ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ*

**ಪ್ರಾಸಾ-1, ಚಾಸಾ-3ರವರ ಪರಿಚಯ ಇದೆ. ಮೃತ ಚಿನ್ನಸ್ವಾಮಿ ಗೊತ್ತು. 11ನೇ ತಾರೀಖು ಪ್ರಾಸಾ-1 ನನಗೆ ಫೋನ ಮಾಡಿ ಚಿನ್ನಸ್ವಾಮಿ ಅಃ ಬಾಬುನನ್ನು ಆಸ್ಪತ್ರೆಗೆ ಸೇರಿಸಿರುವುದಾಗಿ ತಿಳಿಸಿದ್ದ, ಮರುದಿನ ನಾನು ಚಿನ್ನಸ್ವಾಮಿ ಮೃತಪಟ್ಟಿರುವುದಾಗಿ ತಿಳಿದು, ಆತನ ಮನೆಯ ಬಳಿ ಹೋಗಿದ್ದೆ, ಆ ಸಮಯದಲ್ಲಿ ಪೊಲೀಸರು ಒಂದು ದಾಖಲೆಗೆ ನನ್ನ ರುಜು ಪಡೆದಿದ್ದರು. ನನಗೆ ಚಿನ್ನಸ್ವಾಮಿ ಕೊಲೆಯಾಗಿದ್ದ ಸ್ಥಳಕ್ಕೆ ಬರುವಂತೆ ಪೊಲೀಸರು ಕರೆದಿರಲಿಲ್ಲ. ನನ್ನ ರುಜು ನೋಡಿದರೆ ಗುರುತಿಸುತ್ತೇನೆ. ನೋಟೀಸಿನಲ್ಲಿ ಸಾಕ್ಷಿ ತಮ್ಮ ರುಜು ಗುರುತಿಸಿದ್ದು, ಅದನ್ನು ನಿಪಿ-4 ಎಂದು ಸಾಕ್ಷಿ ರುಜುವನ್ನು ನಿಪಿ-4(ಎ) ಎಂದು ಗುರುತಿಸಿದೆ. ನಿಪಿ-2 ಮಹಜರನಲ್ಲಿರುವ ಸಾಕ್ಷಿ ರುಜುವನ್ನು ನಿಪಿ-2(ಬಿ) ಎಂದು ಗುರುತಿಸಿದೆ. ಈ ಎರಡೂ ದಾಖಲೆಗಳಿಗೆ ಮನೆಯ ಬಳಿ ರುಜು ಮಾಡಿದ್ದೆ, ಮರುದಿನ ಪೊಲೀಸರು ನನ್ನನ್ನು ಠಾಣೆಗೆ ಕರೆಸಿ ಚೀಟಿಗಳ ಮೇಲೆ ನನ್ನ ರುಜು ಪಡೆದಿದ್ದರು. ಮು.ಮಾ-ಗಳ ಮೇಲೆ ಇರುವ ಚೀಟಿಯಲ್ಲಿ ಸಾಕ್ಷಿ ತನ್ನ ರುಜು ಗುರುತಿಸಿದ್ದಾನೆ.**

*(ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೇಳುತ್ತಾರೆ. ಸಾಕ್ಷಿಯು ಪೋಲೀಸರ ಎದುರಿನ ಹೇಳಿಕೆಯ ಪ್ರತಿಕೂಲವಾಗಿ ನುಡಿಯುತ್ತಿರುವುದರಿಂದ ಅನುಮತಿ ನೀಡಲಾಯಿತು.)*

*ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-*

**2. ಪೊಲೀಸರು ಚಿನ್ನಸ್ವಾಮಿಗೆ ಹಲ್ಲೆಯಾಗಿದ್ದ ಸ್ಥಳಕ್ಕೆ ನನ್ನನ್ನು ನೋಟೀಸು ಕೊಟ್ಟು ಕರೆಸಿದ್ದರು ಎಂದರೆ ಸರಿಯಲ್ಲ. ಅಲ್ಲಿ ನನ್ನ ಸಮಕ್ಷಮ ಮಹಜರ ಬರೆದು, ಮು.ಮಾ-ಗಳನ್ನು ಅಮಾನತ್ತುಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಅವು ಬಾಟಲ್ ಚೂರು ಮತ್ತು ರಕ್ತದ ಕಲೆ ಆಗಿದ್ದವು ಎಂದರೆ ಸರಿಯಲ್ಲ. ಮು.ಮಾ-ಗಳ ಮೇಲೆ ಕೂಡ ಸ್ಥಳದಲ್ಲಿಯೇ ರುಜು ಮಾಡಿದ್ದೆ ಎಂದರೆ ಸರಿಯಲ್ಲ. ಈಗ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.**

**ಪಾಟೀ ಸವಾಲು ಃ ಆರೋಪಿಗಳ ಪರ ವಕೀಲರಿಂದಃ- ಇಲ್ಲ**

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

**ಓ ಹೇ ಕೇ ಸ ಇ ಎ ಒ.,**

**23.11.2022.**
**(ಎಂ.ಎಲ್. ರಘುನಾಥ್)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಮೈಸೂರು.**